21. ಶ್ರೀ ಎಂ. ವೆಂಕಟರೆಡ್ಡಿ
22. ಶ್ರೀ ನಂದಗೋಪಾಲ್
23. ಶ್ರೀ ಮುನಿಯಪ್ಪ (ಜಂಟಿ)

ಮೈಸೂರು ಗ್ರಾಹಕರ ವೇದಿಕೆಯಲ್ಲಿ ದಾಖಲಾಗಿರುವ ದೂರುಗಳು

4664 (5405) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಮೈಸೂರು ಗ್ರಾಹಕರ ವೇದಿಕೆಯಲ್ಲಿ ದಾಖಲಾಗಿರುವ ದೂರುಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ಕೊಡುವುದು)

ಆ) ದಾಖಲಾದ ದೂರುಗಳನ್ನು ನಿಖಾಳೆ ಮಾಡಲಾಗಿದೆಯೇ; ಬಾಕಿ ಇರುವ ಪ್ರಕರಣಗಳು ಎಷ್ಟು;

ಇ) ಗ್ರಾಹಕ ವ್ಯವಹಾರಗಳ ವೇದಿಕೆಯ ಅಸ್ತಿತ್ವವನ್ನು ನಾಗರೀಕರಿಗೆ ಮನವರಿಕೆ ಮಾಡಿಕೊಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಈ) ಮೈಸೂರಿನ ಗ್ರಾಹಕರ ವೇದಿಕೆಯಲ್ಲಿ ಇರುವ ಸರ್ಕಾರೇತರ ಪ್ರತಿನಿಧಿಗಳು ಯಾರು; ಅವರು ಎಷ್ಟು ವರ್ಷಗಳಿಂದ ಈ ಹುದ್ದೆಯಲ್ಲಿದ್ದಾರೆ;

ಉ) ಗ್ರಾಹಕರ ವೇದಿಕೆಯನ್ನು ಬಲಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಅಂದರೆ ದಿನಾಂಕ:1.1.2000ದಿಂದ 30.6.2003 ರವರೆಗೆ ದಾಖಲಾಗಿರುವ ದೂರುಗಳ ಸಂಖ್ಯೆ 1021 ಆಗಿದ್ದು, ತಾಲ್ಲೂಕುವಾರು ವಿವರ ಈ ಕೆಳಕಂಡಂತಿರುತ್ತದೆ:

ತಾಲ್ಲೂಕಿನ ಹೆಸರು	ದಾಖಲಾದ ಪ್ರಕರಣಗಳ ಸಂಖ್ಯೆ
ಮೈಸೂರು ನಗರ/ ಮೈಸೂರು	903
ತಾಲ್ಲೂಕು	0
ನಂಜನಗೂಡು	17
ಟಿ. ನರಸೀಪುರ	06
ಹುಣಸೂರು	06
ಕೆ.ಆರ್. ನಗರ	11
ಹೆಚ್.ಡಿ. ಕೋಟೆ	03
ಚಾಮರಾಜನಗರ ಜಿಲ್ಲೆ	75
ಒಟ್ಟು	1021

ಆ) ದಿನಾಂಕ 1.1.2000ದಿಂದ 30.6.2003 ರವರೆಗೆ ದೂರುಗಳನ್ನು ಇತ್ಯರ್ಥಪಡಿಸಿರುವ ಹಾಗೂ ಬಾಕಿಯಿರುವ ಪ್ರಕರಣಗಳು ಈ ಕೆಳಕಂಡಂತೆ ಇವೆ:

ತಾಲ್ಲೂಕಿನ ಹೆಸರು	ಇತ್ಯರ್ಥವಾಗಿರುವ ಒಟ್ಟು ಪ್ರಕರಣಗಳು	ಬಾಕಿಯಿರುವ ಒಟ್ಟು ಪ್ರಕರಣಗಳು
ಮೈಸೂರು	1191	128

1	2	3
ನಗರ / ಮೈಸೂರು ತಾಲ್ಲೂಕು		
ನಂಜನಗೂಡು	21	01
ಟಿ. ನರಸೀಪುರ	09	01
ಹುಣಸೂರು	12	01
ಕೆ.ಆರ್. ನಗರ	18	01
ಹೆಚ್.ಡಿ. ಕೋಟೆ	23	–
ಪಿರಿಯಾಪ್ಟಣ	–	–
ಚಾಮರಾಜನಗರ	10	–
ಗುಂಡ್ಲುಪೇಟೆ	03	–
ಯಳಂದೂರು	04	–
ಕೊಳ್ಳೇಗಾಲ	04	–
ಒಟ್ಟು	1295**	132

** 3 ವರ್ಷಗಳಿಗಿಂತ ಹಿಂದಿಹನ ಪ್ರಕರಣಗಳನ್ನು ವಿಲೇ ಮಾಡಿರುವುದರಿಂದ, ಇತ್ಯರ್ಥವಾಗಿರುವ ಪ್ರಕರಣಗಳ ಸಂಖ್ಯೆ ಹೆಚ್ಚಿದೆ.

ಇ)I. ಗ್ರಾಹಕರ ಹಕ್ಕುಗಳು ಹಾಗೂ ಪರಿಹಾರಗಳ ಬಗ್ಗೆ ಜನತೆಯಲ್ಲಿ ಜಾಗೃತಿ ಮೂಡಿಸಲು ಪ್ರತಿ ವರ್ಷವೂ ಮಾರ್ಚ್ 15 ರಂದು ವಿಶ್ವಗ್ರಾಹಕರ ದಿನಾಚರಣೆಯನ್ನು ಹಾಗೂ ಡಿಸೆಂಬರ್, 24 ರಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆಯನ್ನು ರಾಜಧಾನಿಯು ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲಿ ಆಚರಿಸಲಾಗುತ್ತಿದೆ.

2. ಗ್ರಾಹಕರ ಜಾಗೃತಿಯನ್ನು ಹೆಚ್ಚಿಸುವ ಬಗ್ಗೆ ಅವಶ್ಯಕ ಸಲಹೆ/ ಸೂಚನೆಗಳನ್ನು ನೀಡಲು ಕರ್ನಾಟಕ ಗ್ರಾಹಕರ ರಕ್ಷಣಾ ಪರಿಷತ್ತನ್ನು ರಚಿಸಿದೆ.

3. ಜಿಲ್ಲೆಯ ಅನುದಾನಿತ ಗ್ರಾಹಕ ಸಂಸ್ಥೆಗಳು ಜಿಲ್ಲಾ ಆಡಳಿತ ಸಹಯೋಗದೊಂದಿಗೆ ವಿಚಾರ ಸಂಕೀರ್ಣ, ವಸ್ತು ಪ್ರದರ್ಶನ, ಬಿತ್ತಿಪತ್ರ ಮತ್ತು ಕೈಪಿಡಿಗಳನ್ನು ಹೊರತರುತ್ತಿದೆ.

4. ಪಡಿತರ ಚೀಟಿದಾರರಿಗೆ ನ್ಯಾಯಬೆಲೆ ಅಂಗಡಿಗಳು ವಿವಿಧ ಪಡಿತರ ಚೀಟಿಗಳು, ಪಡಿತರ ಚೀಟಿಗಳನ್ನು ಪಡೆಯುವ ಬಗ್ಗೆ ಮಾಹಿತಿ ನೀಡಲು ನಾಗರೀಕ ಸನ್ನದ್ದನ್ನು ಹೊರತಂದಿದೆ.

5. ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಹಕರಿಗೆ ಅರಿವು ಮೂಡಿಸಲು ಗ್ರಾಹಕ ಮಾಹಿತಿ ಕೇಂದ್ರವನ್ನು ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ.

6. ಪಡಿತರ ಚೀಟಿದಾರರ ಕುಂದುಕೊರತೆಗಳನ್ನು ನಿವಾರಿಸಲು ಜಿಲ್ಲಾ ವ್ಯಾಪ್ತಿಯಲ್ಲಿ ಆಹಾರ ಅದಾಲತ್ತನ್ನು ನಡೆಸಲಾಗುತ್ತಿದೆ. ಅಲ್ಲದೆ ಜನ ಜಾಗೃತಿ ಶಿಬಿರವನ್ನು ಮೊದಲನೇ ಹಂತದಲ್ಲಿ 5 ಜಿಲ್ಲೆಗಳಲ್ಲಿ ನಡೆಸಲಾಗಿದೆ.

ಈ) ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸದಸ್ಯರುಗಳ ವಿವರ ಈ ಕೆಳಕಂಡಂತಿರುತ್ತದೆ.

ಸದಸ್ಯರ ಹೆಸರು	ಸದಸ್ಯರ ಸೇವಾವಧಿ
ಸಮಿತಿ ಎಂ. ಮಹಾದೇವಿ	7.11.2002 ರಿಂದ
(ಮಹಿಳಾ ಸದಸ್ಯರು)	6.11.2007 ರವರೆಗೆ
ಶ್ರೀ ಜಿ.ವಿ. ಬಾಲಸುಬ್ರಹ್ಮಣ್ಯ	26.6.2003 ರಿಂದ
	25.6.2008 ರವರೆಗೆ

ಉ)1. ಗ್ರಾಹಕರ ವೇದಿಕೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಕಾಲಕಾಲಕ್ಕೆ ನೇಮಕ ಮಾಡಲಾಗುತ್ತಿದೆ.

2. ವ್ಯಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ, ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು, ನಿಯೋಜನೆಯ ಮೇಲೆ ಸಿಬ್ಬಂದಿಯ ನೇಮಕ ಹಾಗೂ ಹಣಕಾಸಿಗೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

3. ಗ್ರಾಹಕರ ವೇದಿಕೆಯಲ್ಲಿ ಹಾಗೂ ರಾಜ್ಯ ಆಯೋಗದಲ್ಲಿ ವಿಲೆ ಮಾಡಿದ ಪ್ರಕರಣಗಳ ವಿವರಗಳನ್ನು ಸಕಾರದ ಮಟ್ಟದಲ್ಲಿ ಪರಿವೀಕ್ಷಣೆ ಮಾಡುತ್ತಿದ್ದು, ಬಾಕಿ ಇರುವ ಪ್ರಕರಣಗಳ ಜರೂರು ವಿಲೆಗೆ ಕರಮ ವಹಿಸುವುದು.

ಮೈಸೂರು ಜಿಲ್ಲೆಯಲ್ಲಿ ಕೃಷಿ ಉತ್ಪನ್ನ ಸಂಸ್ಕರಣ ಸಂಸ್ಥೆಗಳು

4665 (5406) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು-ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೃಷಿ ಉತ್ಪನ್ನ ಸಂಸ್ಕರಣಾ ಸಂಸ್ಥೆಗಳು ಎಷ್ಟು ಯಾವುವು;

ಆ) ಈ ಸಂಸ್ಥೆಯಲ್ಲಿ ಸಿದ್ಧಪಡಿಸಲಾಗಿರುವ ಉತ್ಪನ್ನಗಳನ್ನು ಜನಪ್ರಿಯಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಇ) ಕೃಷಿ ಉತ್ಪನ್ನ ಸಂಸ್ಥೆಗಳು ಲಾಭದಾಯಕವಾಗಿ ಕೆಲಸ ಮಾಡುತ್ತಿವೆಯೇ; ಇಲ್ಲವಾದರೆ ಅನುಬವಿಸಿರುವ ನಷ್ಟದ ಪ್ರಮಾಣವೆಷ್ಟು;

ಈ) ಕೃಷಿ ಉತ್ಪನ್ನಗಳನ್ನು ಲಾಭದಾಯಕವಾಗಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಜಿ. ರಾಜುಗೌಡ (ಕೃಷಿ ಮತ್ತು ಸಂಸ್ಕರಣ ರಾಜ್ಯ ಸಚಿವರು)

ಅ) ರಾಜ್ಯ ಸರ್ಕಾರ ವಲಯದಲ್ಲಿ ಕರ್ನಾಟಕ ಆಗ್ರೋ ಕಾರ್ನ್ ಸಂಸ್ಥೆಯ ಒಂದು ವಿಭಾಗವು ಮೈಸೂರು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಆ) ಕರ್ನಾಟಕ ಆಗ್ರೋ ಕಾರ್ನ್ ಸಂಸ್ಥೆಯಲಲಿ ಉತ್ಪನ್ನವನ್ನೆಲ್ಲವನ್ನು ಭಾರತ ಸರ್ಕಾರದ ಯೋಜನೆಯಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಅಂಗವಾಡಿ ಮತ್ತು ಪ್ರಾಥಮಿಕ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರವಾಗಿ ನೀಡಲು ಸರಬರಾಜು ಮಾಡಲಾಗುತ್ತಿದೆ.

ಇ) ಸದರಿ ಸಂಸ್ಥೆಯು ಲಾಭದಾಯಕವಾಗಿ ನಡೆಯುತ್ತಿದೆ.

ಈ) ಉದ್ಭವಿಸುವುದಿಲ್ಲ.